ಒಂದು ಘಟನೆ

# ಮಾಮನುಸ್ಮರ ಯುದ್ಧ್ಯ ಚ

ಸ್ವಾಮಿ ರಾಘವೇಶಾನಂದ

ಇದು ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯ ೮ನೇ ಅಧ್ಯಾಯದ ೭ನೇ ಶ್ಲೋಕದಲ್ಲಿ ಹೇಳಿರುವ ಮಾತು. ಅಂದರೆ 'ನನ್ನನ್ನೇ, ಅಂದರೆ ದೇವರನ್ನೇ ಚಿಂತೆ ಮಾಡುತ್ತಾ ಯುದ್ಧ ಮಾಡು.'

### ಸಾವಿನ ರೂಪ

ಸಾವು ಯಾವಾಗ ಯಾವ ರೂಪದಲ್ಲಿ ಬರುವುದೋ ಅದನ್ನು ಯಾರೂ ಹೇಳುವುದಕ್ಕೆ ಆಗುವುದಿಲ್ಲ. ಆದರೆ ಖಂಡಿತ ಅದು ಪ್ರತಿಯೊಬ್ಬನಿಗೂ ಬಂದೇ ಬರುತ್ತದೆ. ನಮ್ಮ ಕಣ್ಣು ಮುಂದೆ ಹಲವಾರು ಜನರು ಸಾಯುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ. ಆದರೆ ನಾವು ಮಾತ್ರ ದೃಢವಾಗಿ ನಂಬಿದ್ದೇವೆ ನಾವು ನಿರಂತರವಾಗಿ ಬದುಕಿರುತ್ತೇವೆಂದು. ಇದೇ ಯಕ್ಷಪ್ರಶ್ನೆಗೆ ಯುಧಿಷ್ಠಿರನು ಕೊಟ್ಟ ಉತ್ತರ. ಏನಪ್ಪಾ, ಅಪಶಕುನವಾದ ಸಾವಿನ ಬಗ್ಗೆ ಚರ್ಚೆ ಮಾಡುತ್ತಿದ್ದಾರಲ್ಲಾ ಎಂದು ಎಣಿಸಬೇಡಿ. ಸುಖ-ದುಃಖ, ಹುಟ್ಟು-ಸಾವು, ಶೀತ-ಉಷ್ಣ ಇಂತಹ ದ್ವಂದ್ವಗಳಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೇ ಒಬ್ಬ ಪಾಶ್ಚಾತ್ಯ ವೇದಾಂತಿ ಹೇಳುತ್ತಾನೆ, 'ಪ್ರಪಂಚದಲ್ಲಿ ಇಬ್ಬರೇ ವ್ಯಕ್ತಿಗಳು ಸುಖವಾಗಿರುವವರು, ಒಬ್ಬ ಹುಟ್ಟದೇ ಇರುವವನು ಮತ್ತೊಬ್ಬ ಸತ್ತವನು.' ಇವರಿಬ್ಬರ ಮಧ್ಯೆ ನಾವು ಇರುವವರಾದುದರಿಂದ ನಾವು ಮಾಡಬೇಕಾಗಿರುವ ಕರ್ತವ್ಯವೇನು ಎಂದು ಆಲೋಚಿಸೋಣ. ಮತ್ತೊಮ್ಮೆ ಯಾವಾಗಲಾದರೂ ನಾವು ಹೇಗೆ ಹುಟ್ಟಿದೆವು, ಮರಣದ ನಂತರ ಏನು ಕಾದಿದೆ ಎಂಬ ಕುತೂಹಲಕರವಾದ ವಿಷಯವನ್ನು ವಿಮರ್ಶಿಸೋಣ.

> ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ರಾಘವೇಶಾನಂದರು ಬೋಧಪ್ರದವಾದ ಘಟನೆಯೊಂದನ್ನು ವರ್ಣಿಸಿರುವರು.

### ನಮ್ಮ ಕರ್ತವ್ಯ

ನಾವು ಸತ್ತು ಈ ಲೋಕವನ್ನು ಬಿಟ್ಟು ಹೋಗುವಾಗ, ನಮ್ಮೆಲ್ಲಾ ಆಸ್ತಿಪಾಸ್ತಿಗಳನ್ನೂ, ಬ್ಯಾಂಕ್ ಬ್ಯಾಲೆನ್ಸ್‌ಗಳನ್ನೂ, ನಮಗೆ ಬೇಕಾದ ಆಪ್ತರುಗಳನ್ನೂ, ಎಲ್ಲರನ್ನೂ, ಎಲ್ಲವನ್ನೂ ಹಿಂದೆ ಬಿಟ್ಟೇ ಹೋಗಬೇಕು. ನಮ್ಮ ಜೊತೆಯಲ್ಲಿ ಬರುವುದೆಂದರೆ ಬರೀ ನಾವು ಮಾಡಿರುವ ಪುಣ್ಯ ಪಾಪಗಳು ಮಾತ್ರ. ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ, ನಾವು ಸತ್ತಮೇಲೆ ಬಹುದೂರ ಪ್ರಯಾಣ ಮಾಡಬೇಕು; ಹಾಗೆ ಪ್ರಯಾಣ ಮಾಡುವಾಗ ದಾರಿಯಲ್ಲಿ ನಮ್ಮ ಬುತ್ತಿ ಎಂದರೆ ನಾವು ಸಂಗ್ರಹಿಸಿರುವ ಪುಣ್ಯ ಎಂದು. ನಾವು ಪುಣ್ಯವಂತರಾಗುವುದಕ್ಕೆ ಯಾವ ರೀತಿಯ ಜೀವನ ನಡೆಸಬೇಕು ಎಂಬುದನ್ನು ಶ್ರೀಕೃಷ್ಣ ಬೋಧಿಸುತ್ತಾನೆ.

ಶ್ರೀಕೃಷ್ಣನಿಗೆ ಸಂನ್ಯಾಸಿಗಳಿಗಿಂತ ಸಂಸಾರಿಗಳ ಮೇಲೆ ಒಲವು ಹೆಚ್ಚು. ಅರ್ಜುನ ಸಂನ್ಯಾಸಿಯಾಗಿ ನಿವೃತ್ತಿ ಮಾರ್ಗ ಹಿಡಿಯುತ್ತೇನೆ ಎಂದರೂ ಬಿಡದೆ, ಪ್ರವೃತ್ತಿಮಾರ್ಗ ನಿನ್ನ ಧರ್ಮ, ಅದರಲ್ಲೇ ನೀನು ಭಗವದ್ದರ್ಶನ ಪಡೆಯುವ ಮಾರ್ಗ ತೋರಿಸುತ್ತೇನೆ ಬಾ ಎನ್ನುತ್ತಾ ಮಾಮನುಸ್ಮರ ಯುದ್ಧ್ಯ ಚ, ಎಂದು ಹೇಳಿದ. ಅಂದರೆ ಪ್ರಪಂಚದಲ್ಲಿ ನಾವು ನಮ್ಮ ನಮ್ಮ ಕರ್ತವ್ಯಗಳನ್ನು ಮಾಡುತ್ತಲೇ ಭಗವಂತನನ್ನು ನೆನೆಯುವುದು ಸಾಧ್ಯ, ಹಾಗೆ ನೆನೆಯಬೇಕು ಎಂದು ಒತ್ತಿ ಹೇಳಿದ್ದಾನೆ. ನಮಗೆಲ್ಲಾ ಬರುವ ಸಂದೇಹವೆಂದರೆ ಒಂದೇ ಕಾಲದಲ್ಲಿ ನಮ್ಮ ಮನಸ್ಸನ್ನು ಎರಡು ವಿಷಯಗಳ ಮೇಲೆ ಅಂದರೆ ಭಗವಂತನ ಮೇಲೆ ಹಾಗೂ ನಮ್ಮ ಕರ್ತವ್ಯದ ಮೇಲೆ ಹರಿಸಲು ಸಾಧ್ಯವೇ?

### ಕರ್ಮದಲ್ಲಿ ಕೌಶಲ

ನಮ್ಮ ಶ್ರೀರಾಮಕೃಷ್ಣಾಶ್ರಮದ ಒಬ್ಬ ಬ್ರಹ್ಮಚಾರಿಗೆ ಒಮ್ಮೆ ಈ ಸಂದೇಹ ಬಂದಿತು. ಆತ ಭಗವದ್ಗೀತೆಯ ಪರಮ ಭಕ್ತ. ಗೀತೆಯ ಉಪದೇಶಗಳನ್ನು ಜೀವನದಲ್ಲಿ ತರಲು ಸತತವಾಗಿ ಪ್ರಯತ್ನಿಸುತ್ತಿದ್ದ. ಯೋಗಃ ಕರ್ಮಸು ಕೌಶಲಮ್ ಎಂಬ ಗೀತೆಯ ಕರ್ಮಯೋಗರಹಸ್ಯಸೂತ್ರ ಅವನಿಗೆ ಅತ್ಯಂತ ಪ್ರಿಯವಾದುದಾಗಿತ್ತು. ಕೆಲಸ ಮಾಡುವಾಗ ಪೂರ್ಣ ಮನಸ್ಸನ್ನು ಆ ಕಾಲಕ್ಕೆ, ಆ ಕೆಲಸದಲ್ಲಿಟ್ಟು ಶ್ರದ್ಧೆಯಿಂದ ಮಾಡುವುದೇ ಯೋಗದ

> ತಸ್ಮಾತ್ ಸರ್ವೇಷು ಕಾಲೇಷು ಮಾಮನುಸ್ಮರ ಯುದ್ಧ್ಯ ಚ |
> ಮಯ್ಯರ್ಪಿತಮನೋಬುದ್ಧಿರ್ಮಾಮೇವೈಷ್ಯಸ್ಯಸಂಶಯಃ ||
>
> ಆದುದರಿಂದ ಎಲ್ಲಾ ಕಾಲದಲ್ಲೂ ನನ್ನನ್ನೇ ಸ್ಮರಿಸುತ್ತಿರು ಮತ್ತು ಯುದ್ಧ ಮಾಡು. ನನಗೆ ಮನಸ್ಸು ಬುದ್ಧಿಗಳನ್ನು ಸಮರ್ಪಿಸಿ ನನ್ನನ್ನೇ ಹೊಂದುವೆ. ಇದರಲ್ಲಿ ಸಂಶಯವಿಲ್ಲ.
>
> ಭಗವದ್ಗೀತಾ ೮.೭.

ರಹಸ್ಯ ಎಂದು ಅರಿತಿದ್ದ. ಅವನಿಗೆ ಮಾಮನುಸ್ಮರ ಯುದ್ಧ್ಯ ಚ ಎಂಬುದನ್ನು ಓದಿದಾಗ ಸಂಶಯ ತಲೆಹೊಕ್ಕಿತು. ಈ ರೀತಿಯ ಸಂಶಯಗಳು ಹಲವಾರು ವಿವರಣೆಗಳಿಗೆ, ಬೆಳಕಿಗೆ ದಾರಿಯಾಗುತ್ತವೆ. ಅರ್ಜುನನಿಗೆ ಸಂಶಯದ ಮೇಲೆ ಸಂಶಯ ಬಂದಿದ್ದುದರಿಂದಲ್ಲವೇ ನಮಗೆ ಇಂತಹ ಅದ್ಭುತ ಗೀತೆ ದೊರಕಿರುವುದು!

## ಪರಿಪ್ರಶ್ನೆ– ಸೇವೆ

ಸರಿ, ಆ ಬ್ರಹ್ಮಚಾರಿ ಇರುವ ಆಶ್ರಮದಲ್ಲಿ ಒಬ್ಬರು ವೃದ್ಧ, ಜ್ಞಾನಿ ಸಂನ್ಯಾಸಿಗಳಿದ್ದರು. ಇವನು ಭಯ ಭಕ್ತಿಯಿಂದ ಅವರ ಬಳಿ ಹೋಗಿ ತನ್ನ ಸಂಶಯವನ್ನು ಅರುಹಿದ: 'ಸ್ವಾಮೀಜಿ, ಕೆಲಸಕ್ಕೆ ಮುಂಚೆ ಅಥವಾ ಕೆಲಸ ಮುಗಿದ ಮೇಲೆ ಭಗವಂತನನ್ನು ನೆನೆಯಲು ಸಾಧ್ಯ. ಆದರೆ ಕೆಲಸ ಮಾಡುವಾಗಲೂ ಅವನನ್ನು ನೆನೆಯ ಬೇಕೆಂದರೆ, ಕೆಲಸ ಕೆಡಬಹುದು. ಅದು ಸಾಧ್ಯವೇ?' ಆ ಸ್ವಾಮೀಜಿ ಯವರು ಅವನನ್ನು ತಲೆ ಎತ್ತಿ ನೋಡಿದರು. ನಿಧಾನವಾಗಿ, ಗೀತೆ ಯಲ್ಲಿ ಶ್ರೀಕೃಷ್ಣ ಅರ್ಜುನನತ್ತ ನೋಡಿ 'ಪ್ರಹಸನ್ನಿವ', ಅಂದರೆ ಮೃದು ಹಾಸ್ಯದಿಂದ ಹೇಳಿದಹಾಗೆ, ಸ್ವಾಮೀಜಿಯವರು ಆ ಬ್ರಹ್ಮಚಾರಿಗೆ ಹೇಳಿದರು, 'ಶ್ರೀಕೃಷ್ಣ ಪರಮಾತ್ಮ ಹೇಳಿದ್ದಾನೆಂದರೆ ಅದು ಖಂಡಿತ ಸತ್ಯ. ಚೆನ್ನಾಗಿ ಆಲೋಚಿಸು, ಅದರ ಮೇಲೆ ಧ್ಯಾನ ಮಾಡು. ಆಗ ಅರ್ಥವಾಗುತ್ತದೆ' ಎಂದು. ಎರಡು ಮೂರು ದಿನದ ನಂತರ ಆ ಬ್ರಹ್ಮಚಾರಿ ಮತ್ತೆ ಬಂದು 'ಸ್ವಾಮೀಜಿ, ಅರ್ಥವಾಗಲಿಲ್ಲ' ಎಂದಾಗ ಅವರು, 'ಸರಿ, ನನಗೂ ವಯಸ್ಸಾಗುತ್ತಾ ಬರುತ್ತಿದೆ. ನಿನಗೆ ಸಮಯವಿದ್ದಲ್ಲಿ, ತೊಂದರೆಯಾಗದಿದ್ದಲ್ಲಿ ನನ್ನ ಕೊಠಡಿಯನ್ನು ಪ್ರತಿದಿನ ಸ್ವಲ್ಪ ಗುಡಿಸಿ, ಸಾರಿಸಲಿಕ್ಕಾಗುತ್ತದೆಯೆ?' ಎಂದು ಕೇಳಿದರು. ಬ್ರಹ್ಮಚಾರಿ ವೃದ್ಧರ ಸೇವೆ ಮಾಡುವ ಪುಣ್ಯ ದೊರೆಯಿತಲ್ಲಾ ಎಂದು ಸಂತೋಷದಿಂದ ಒಪ್ಪಿಕೊಂಡ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನ ಉಪದೇಶದ ಪ್ರಕಾರ ಎಲ್ಲ ವಿದ್ಯೆಯನ್ನೂ 'ಪರಿಪ್ರಶ್ನೇನ ಸೇವಯಾ' ಅಂದರೆ ಗುರುವನ್ನು ಪ್ರಶ್ನಿಸುವುದರಿಂದಲೂ, ಅವರ ಸೇವೆಯಿಂದಲೂ, ಪಡೆಯಬೇಕು. ಬ್ರಹ್ಮಚಾರಿ ಪ್ರಶ್ನೆಯನ್ನು ಕೇಳಿದ್ದಾಗಿತ್ತು. ಈಗ ಸೇವೆ ಮಾಡುವ ಸುಯೋಗವೂ ದೊರೆತಿತ್ತು. ಪ್ರತಿದಿನ ಸ್ವಾಮಿಗಳು ಅವರ ಕೊಠಡಿಯಲ್ಲಿಲ್ಲದಿರುವಾಗ ಬ್ರಹ್ಮಚಾರಿ ಬಂದು ಅವರ ಕೊಠಡಿ ಯನ್ನು ಶುದ್ಧಗೊಳಿಸುತ್ತಿದ್ದ. ಹೀಗೆ ನಾಲ್ಕು ಐದು ದಿನಗಳು ಕಳೆದವು. ಆರನೆಯ ದಿನ ಆ ಸ್ವಾಮೀಜಿಯವರು ದೂರದಲ್ಲಿ ನಿಂತು ಇವನು ಮಾಡುತ್ತಿದ್ದ ಕೆಲಸವನ್ನೇ ಗಮನಿಸುತ್ತಿದ್ದರು. ಸ್ವಲ್ಪ ಹೊತ್ತಾದ ಮೇಲೆ ಬ್ರಹ್ಮಚಾರಿ ತಲೆ ಎತ್ತಿದಾಗ ಇವರು ದೂರದಲ್ಲಿ ನಿಂತು ಗಮನಿಸುತ್ತಿರುವುದನ್ನು ನೋಡಿ ಮನದಲ್ಲಿ ಸ್ವಲ್ಪ ಆತಂಕ ಮೂಡಿತು. ತಾನು ಸರಿಯಾಗಿ ಸಾರಿಸುತ್ತಿದ್ದೇನೆಯೆ ಇಲ್ಲವೇ

> ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ |
> ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ||
>
> ಅದನ್ನು ದೀರ್ಘನಮಸ್ಕಾರದಿಂದಲೂ ಪರಿಪ್ರಶ್ನೆಯಿಂದಲೂ ಗುರು ಶುಶ್ರೂಷೆಯಿಂದಲೂ ತಿಳಿದುಕೊ. ತತ್ತ್ವವನ್ನು ಅರಿತ ಜ್ಞಾನಿಗಳು ನಿನಗೆ ಜ್ಞಾನವನ್ನು ಉಪದೇಶ ಮಾಡುವರು.
>
> ಭಗವದ್ಗೀತಾ ೪.೩೪

ಎಂಬುದರ ಕಡೆಗೆ ಗಮನ ಹರಿದು ಇನ್ನೂ ನಿಷ್ಠೆಯಿಂದ ಸಾರಿಸಲು ಶುರು ಮಾಡಿದ. ಇಂದು ಅವನಿಗೆ ಆ ಕೆಲಸದಲ್ಲಿ ಹೆಚ್ಚು ತೃಪ್ತಿಯಿತ್ತು. ಎರಡು ಮೂರು ದಿನ ಹೀಗೆಯೇ ನಡೆಯಿತು. ಪ್ರತಿ ಬಾರಿಯೂ ಅವರನ್ನು ದೂರದಲ್ಲಿ ಗಮನಿಸಿದಾಗ ಕೈ ಹಾಗೂ ಮನಸ್ಸು ಹೆಚ್ಚು ಚುರುಕಾಗುತ್ತಿತ್ತು.

## ಶ್ರದ್ಧೆ– ಜಾಗರೂಕತೆ

ಹೀಗೆ ಮತ್ತೆರಡು ಮೂರು ದಿನಗಳಾದ ಮೇಲೆ, ಆ ಸ್ವಾಮೀಜಿ ಯವರು ಅವನನ್ನು ಕರೆದು ಮಾತನಾಡಿಸಿದರು. ಅವರು ಹೇಳಿದರು, 'ಮಗೂ, ಇನ್ನುಮೇಲೆ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತೇನೆ. ನಿನ್ನ ಉಪಕಾರಕ್ಕೆ ಧನ್ಯವಾದಗಳು.' ಎಂದು. ಅವರ ವರ್ತನೆ ಗೊತ್ತಿದ್ದ ಬ್ರಹ್ಮಚಾರಿ ಸರಿ ಎಂದು ಅವರಿಗೆ ನಮಸ್ಕರಿಸಿ ನಿಧಾನವಾಗಿ ಮತ್ತೆ ತನ್ನ ಪ್ರಶ್ನೆಯನ್ನು ಕೇಳಿದಾಗ ಅವರು ನಕ್ಕರು. 'ಇನ್ನೂ ನಿನಗೆ ಉತ್ತರ ದೊರೆಯಲಿಲ್ಲವೆ?' ಎಂದರು. ಆತ ತಲೆಯಲ್ಲಾಡಿಸಿದ. ಆಗ ಅವರು 'ಮಗೂ, ನೀನು ಮಾಡುತ್ತಿದ್ದ ಆ ಗುಡಿಸುವ ಕೆಲಸದಲ್ಲಿ, ನೀನೇ ಮಾಡುವಾಗಲೂ, ಹಾಗೂ ನಾನು ದೂರದಲ್ಲಿ ನಿಂತು ನೋಡುತ್ತಿದ್ದಾಗ ಮಾಡುವಾಗಲೂ, ಏನಾದರೂ ವ್ಯತ್ಯಾಸ ತೋರಿಬಂತೆ?' ಎಂದರು. ಅದಕ್ಕೆ ಆತ ಯೋಚಿಸಿ ಹೇಳಿದ, 'ಖಂಡಿತ ಸ್ವಾಮೀಜಿ, ನಿಮ್ಮನ್ನು ನೋಡಿ ದಾಗಲೆಲ್ಲಾ ನಾನು ಹೆಚ್ಚು ಹೆಚ್ಚು ಶ್ರದ್ಧೆಯಿಂದ, ಜಾಗರೂಕನಾಗಿ ಕೆಲಸ ಮಾಡುತ್ತಿದ್ದೆ.' 'ಆ, ಅಷ್ಟೇ ನೋಡು ವ್ಯತ್ಯಾಸ. ನೀನು ಪ್ರತಿ ಕಾರ್ಯ ಮಾಡುವಾಗಲೂ ಭಗವಂತ ದೂರದಿಂದ ನನ್ನನ್ನು ನೋಡುತ್ತಿದ್ದಾನೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊ. ಆಗ "ಮಾಮನುಸ್ಮರ" ಆಗುತ್ತದೆ. ನಿನ್ನ ಕೆಲಸವೂ ಇನ್ನೂ ಉತ್ತಮ ಮಟ್ಟದ್ದಾಗಿರುತ್ತದೆ' ಎಂದು ಹೇಳಿದರು.

ಸ್ವಾಮೀಜಿಯವರ ಮುಖದಲ್ಲಿದ್ದ ನಗುವಿನ ಮಿಂಚು ಆ ಬ್ರಹ್ಮಚಾರಿಯ ಮನಸ್ಸಿನಲ್ಲಿ ಜ್ಞಾನದ ಅಮೃತ ವರ್ಷವನ್ನೇ ತಂದಿತು.

> ತನಗಿಷ್ಟವಾದ ಕೆಲಸವನ್ನು ಮಾಡುವುದೇನೂ ದೊಡ್ಡದಲ್ಲ. ಆದರೆ ಯಾರು ಯಾವ ಕೆಲಸವನ್ನಾದರೂ ತನಗಿಷ್ಟವಾದ ಕೆಲಸದಂತೆ ಮಾರ್ಪಡಿಸಬಲ್ಲನೊ ಅವನೇ ಶ್ರೇಷ್ಠ.
>
> — ಸ್ವಾಮಿ ವಿವೇಕಾನಂದ